ಪದವಿ ಪೂರ್ವ ಕಾಲೇಜು ಮಂಜೂರಾತಿ

825 (1086) ಶ್ರೀ ವಿಶ್ವನಾಥ್ ಎಸ್.ಆರ್. (ಯಲಹಂಕ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಲಹಂಕ ಮತಕ್ಷೇತ್ರ ವ್ಯಾಪ್ತಿಯ ಹೆಸರುಘಟ್ಟ ಹೋಬಳಿ ರಾಜಾನುಕುಂಟೆ ಗ್ರಾಮ ಹಾಗೂ ಯಲಹಂಕ ಉಪನಗರಗಳಲ್ಲಿ ಎರಡು ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಆ) ಹಾಗಿದ್ದಲ್ಲಿ, ಶೈಕ್ಷಣಿಕ ವರ್ಷದಿಂದಲೇ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲು ಸಾಧ್ಯವೇ? (ವಿವರ ನೀಡುವುದು);

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಪ್ರಸ್ತಾವನೆ ಬಂದಿರುತ್ತದೆ.

ಆ) ಸರ್ಕಾರದ ಆದೇಶ ಸಂಖ್ಯೆ: ಇಡಿ 451 ಯೋಯೋಕ 2009 ದಿನಾಂಕ: 20/02/2010 ರಲ್ಲಿ ಪ್ರಸ್ತುತ ಮಂಜೂರಾಗಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವವರೆಗೆ ಯಾವುದೇ ಹೊಸ ಕಾಲೇಜುಗಳನ್ನು ಮಂಜೂರು ಮಾಡದಿರಲು ತೀರ್ಮಾನಿಸಲಾಗಿದೆ.

ಪಶುವೈದ್ಯರ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಹಾಗೂ ಇತರೆ

949 (913) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶುಸಂಗೋಪನಾ ಇಲಾಖೆಯಲ್ಲಿ ಖಾಲಿಯಿರುವ ಪಶುವೈದ್ಯರ ಹುದ್ದೆಗಳೆಷ್ಟು; ಅವುಗಳನ್ನು ಭರ್ತಿ ಮಾಡಲು ಸರಕಾರ ಕೈಗೊಂಡ ಕ್ರಮಗಳೇನು;

ಆ) ವಿವಿಧ ವರ್ಗಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರದ ತ್ವರಿತ ಕ್ರಮಗಳೇನು;

ಇ) ಪಶುಸಂಗೋಪನಾ ಜನಪ್ರಿಯಗೊಳಿಸಲು ಸರಕಾರ ಅನುಷ್ಠಾನ ಗೊಳಿಸುತ್ತಿರುವ ಯೋಜನೆಗಳೇನು;

ಈ) ಪಶುಸಂಗೋಪನಾ ಕುರಿತ ಕೇಂದ್ರ ಸರಕಾರದ ಯೋಜನೆಗಳ ವಿವರಗಳೇನು?

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) 979.

ವಿಶೇಷ ನೇಮಕಾತಿ ನಿಯಮಗಳ ಮೂಲಕ ಇಲಾಖೆಯಲ್ಲಿ ಖಾಲಿ ಇರುವ 487 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಆ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಈ ಕೆಳಕಂಡಂತೆ ಕ್ರಮ ತೆಗೆದುಕೊಳ್ಳಲಾಗುವುದು.

1. ಪಶುವೈದ್ಯಾಧಿಕಾರಿ : ವಿಶೇಷ ನೇಮಕಾತಿ ನಿಯಮಗಳ ಮೂಲಕ ಇಲಾಖೆಯಲ್ಲಿ ಖಾಲಿ ಇರುವ 487 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

2. ಪಶುವೈದ್ಯಕೀಯ ಮೇಲ್ವಿಚಾರಕರು : ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಗೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಖಾಲಿ ಇರುವ ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಗಳನ್ನು ತುಂಬಲಾಗುವುದು.

3. ಹಿರಿಯ ಪಶುವೈದ್ಯಕೀಯ ಪರೀಕ್ಷಕರು : ಪಶುವೈದ್ಯ ಪರೀಕ್ಷಕರ ಹುದ್ದೆಯಿಂದ ಹಿರಿಯ ಪಶುವೈದ್ಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಮುಂಬಡ್ತಿ ನೀಡುವ ಸಂದರ್ಭದಲ್ಲಿ ಖಾಲಿ ಇರುವ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

4. ಪಶುವೈದ್ಯಕೀಯ ಪರೀಕ್ಷಕರು : 300 ಪಶುವೈದ್ಯ ಪರೀಕ್ಷಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಆಯ್ಕೆ ಮಾಡಲಾಗಿದ್ದು, ನೇಮಕಾತಿ ಸಂದರ್ಭದಲ್ಲಿ ಖಾಲಿ ಇರುವ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ತುಂಬಲಾಗುವುದು.

5. ಪಶುವೈದ್ಯ ಸಹಾಯಕರು : ನೇರ ನೇಮಕಾತಿ ಮೂಲಕ 642 ಪಶುವೈದ್ಯ ಸಹಾಯಕರ ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗಿದ್ದು, ನೇಮಕಾತಿ ಸಂದರ್ಭದಲ್ಲಿ ಖಾಲಿ ಇರುವ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ತುಂಬಲಾಗುವುದು.

6. ದ್ವಿತೀಯ ದರ್ಜೆ ಸಹಾಯಕರು: ನೇರ ನೇಮಕಾತಿ ಮೂಲಕ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುವುದು.

7. ವಾಹನ ಚಾಲಕರು : ಜಿಲ್ಲಾ ಉಪನಿರ್ದೇಶಕರುಗಳಿಂದ ಹೊರ ಗುತ್ತಿಗೆ ಮುಖಾಂತರ ಹಾಗೂ ಎಸ್.ಎಸ್.ಎಲ್.ಸಿ ಪಾಸು ಮಾಡಿರುವ ಮತ್ತು ವಾಹನ ಚಾಲನೆ ತರಬೇತಿ ಪಡೆದಿರುವ ಡಿ-ದರ್ಜೆ ನೌಕರರಿಗೆ ಮುಂಬಡ್ತಿ ನೀಡುವ ಮೂಲಕ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

8. ಡಿ-ದರ್ಜೆ ನೌಕರರು : ಹೊರ ಗುತ್ತಿಗೆ ಆಧಾರದ ಮೇಲೆ ಉಪ ನಿರ್ದೇಶಕರುಗಳ ಮುಖಾಂತರ ಖಾಲಿ ಇರುವ 'ಡಿ ದರ್ಜೆ' ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುವುದು.

ಇ) ಯೋಜನಾ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.

ಈ) ಯೋಜನಾ ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.

ಅನುಬಂಧ – I

ಪಶುಸಂಗೋಪನೆಯನ್ನು ಜನಪ್ರಿಯಗೊಳಿಸಲು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ವಿವರ

1. ಸುವರ್ಣ ಕರ್ನಾಟಕ ಗೋವು ಸಂರಕ್ಷಣೆ
2. ಮೈಸೂರಿನ ಪಿಂಜರಾಪೋಲ್ ಮತ್ತು ಇತರೆ ಗೋಶಾಲೆಗಳಿಗೆ ಬೆಂಬಲ
3. ಕುಕ್ಕುಟ ಕ್ಷೇತ್ರಗಳನ್ನು ಸ್ಥಾಪಿಸಲು ನಿರುದ್ಯೋಗಿ ಯುವಕರಿಗೆ ಸಹಾಯ

4. ಕುರಿ ಅಭಿವೃದ್ಧಿಗಾಗಿ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಗೆ ಸಹಾಯಾನುದಾನ
5. ವಿಶೇಷ ಅಭಿವೃದ್ಧಿ ಯೋಜನೆ, ಮೇವು ಅಭಿವೃದ್ಧಿ ಯೋಜನೆ
6. ಗಿರಿಜನ ಉಪ ಯೋಜನೆ ಮತ್ತು ವಿಶೇಷ ಘಟಕ ಯೋಜನೆ
7. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ
8. ಹಾಲು ಉತ್ಪಾದಕರಿಗೆ ಉತ್ತೇಜನ
9. ಮಹಿಳೆಯರಿಗಾಗಿ ಹೈನುಗಾರಿಕೆ (ಅಮೃತ ಯೋಜನೆ)
10. ಶುದ್ಧ ಮತ್ತು ಗುಣಮಟ್ಟದ ಹಾಲು ಉತ್ಪಾದನೆಗೆ ಮೂಲಭೂತ ಸೌಕರ್ಯಗಳು

ಅನುಬಂಧ – 2

ಪಶುಸಂಗೋಪನಾ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕೇಂದ್ರ ಪುರಸ್ಕೃತ ಯೋಜನೆಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಯೋಜನೆ ಹೆಸರು	ಕೇಂದ್ರದ ಪಾಲು	ರಾಜ್ಯದ ಪಾಲು	ಒಟ್ಟು
1	ಜಾನುವಾರು ರೋಗಗಳ ತಹಬದಿಗಾಗಿ ರಾಜ್ಯಗಳಿಗೆ ನೆರವು (75:25)	980.11	457.41	1437.52
2	ದಕ್ಷಿಣ ರಾಜ್ಯಗಳ ಪ್ರಾದೇಶಿ ರೋಗ ತಪಾಸಣಾ ಪ್ರಯೋಗಾಲಯ (100%)	50.00	–	50.00
3	ಪಶುಸಂಗೋಪನೆ ಅಂಕಿ ಅಂಶಗಳ ಸಂಗ್ರಹಣೆ ಮತ್ತ ಜಾನುವಾರು ಗಣತಿ (100%)	65.00	–	65.00

4	ದೊಡ್ಡ ರೋಗ ನಿವಾರಣೆಗಾಗಿ ಕಾವಲು ಮತ್ತು ಅದರ ನಿರ್ಮೂಲನೆಗಾಗಿ ಚುಚ್ಚುಮದ್ದು ಹಾಕುವ ಕಾರ್ಯಕ್ರಮ (100%)	20.00	15.01	35.01
5	ಮಾದರಿ ಸಮೀಕ್ಷೆ ಯೋಜನೆ, ಹಾಲು ಮೊಟ್ಟೆ ಮತ್ತು ಉಣ್ಣೆ ಉತ್ಪಾದನೆ (50:50)	50.07	50.06	100.13
6	ಕರ್ನಾಟಕ ಪಶುವೈದ್ಯಕೀಯ ಪರಿಷತ್ತು ಸ್ಥಾಪನೆ	25.00	25.00	50.00
7	ರಾಜ್ಯ ಕುಕ್ಕುಟ ಕ್ಷೇತ್ರಗಳಿಗೆ ಸಹಾಯ (50:50)	100.00	25.00	125.00
8	ಶುದ್ಧ ಹಾಗೂ ಗುಣಮಟ್ಟದ ಹಾಲು ಉತ್ಪಾದನೆಗೆ ಮೂಲಭೂತ ಸೌಕರ್ಯಗಳ ಬಲವರ್ಧನೆ (100%)	150.00		150.00
9	ಐ.ಆರ್.ಎಂ.ಎ ಮಾದರಿ ಸಂಸ್ಥೆ ಸ್ಥಾಪನೆ (50:50)	5.00	5.00	10.00
	ಒಟ್ಟು	1445.18	577.88	2022.66

ನೆರೆ ಪೀಡಿತ ಪ್ರದೇಶಗಳಿಗೆ ಆಸರೆ ಯೋಜನೆಯಡಿ ಮನೆ ನಿರ್ಮಾಣ

76 (1234) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ಟೋಬರ್‌ನಲ್ಲಿ ಉಂಟಾದ ಪ್ರವಾಹದಿಂದಾಗಿ ಸಂತ್ರಸ್ತರಾದವರ ಪುನರ್ ವಸತಿಗಾಗಿ ಒಟ್ಟು ಎಷ್ಟು ಮನೆಗಳ ನಿರ್ಮಾಣದ ಅವಶ್ಯಕತೆ ಇರುತ್ತದೆ;